**CC 5125/2023**

**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ, ಹೊಸಪೇಟೆ.**

**ಸಿಸಿ ನಂಬರ್** 5125/2023

**ಸಿ ಡಬ್ಲ್ಯೂ** 6

**ಪಿ ಡಬ್ಲ್ಯೂಃ** 5

| | |
|---|---|
| **ಸಾಕ್ಷಿಯ ಹೆಸರು -** | **ಜಗದೀಶ** |
| **ತಂದೆಯ ಹೆಸರು -** | **ಗಾದಿಲಿಂಗಪ್ಪ** |
| **ವಯಸ್ಸು -** | 50 **ವರ್ಷಗಳು** |
| **ಉದ್ಯೋಗ -** | **ಮುಖ್ಯೋಪಾಧ್ಯಾಯರು, ಸರ್ಕಾರಿ ಪ್ರೌಢ ಶಾಲೆ, ಬುಕ್ಕಸಾಗರ** |
| **ವಾಸಸ್ಥಳ -** | **ಹೊಸಪೇಟೆ** |

**ಸಾಕ್ಷಿಯನ್ನು ದಿನಾಂಕಃ** 05-07-2025 **ರಂದು ಪ್ರಾಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಎ. ಪಿ. ಪಿ. ಅವರಿಂದ**

ಚಾಸಾ **-1** ರಿಂದ **5, 7** ರಿಂದ **13** ರವರ ಪರಿಚಯ ಇರುತ್ತದೆ. ನ್ಯಾಯಾಲಯದ ಮುಂದಿರುವ ಆರೋಪಿಯನ್ನು ಈ ಮೊದಲು ನೋಡಿರುತ್ತೇನೆ. ಸಾಕ್ಷಿ ಈ ದಿನ ಹಾಜರು ಇರುವ **1** ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. **2** ನೇ ಆರೋಪಿ ಗೈರು ಹಾಜರು ಇರುತ್ತಾರೆ.

ದಿಃ **24-06-2023** ರಂದು ಬೆಳಿಗ್ಗೆ **06.30** ಗಂಟೆಗೆ ಚಾಸಾ **-1** ರವರು ಕರೆ ಮಾಡಿ ಕಡ್ಡಿರಾಂಪೂರದ ಹತ್ತಿರ ಯಾವುದೋ ಅವ್ಯವಹಾರ ನಡೆಯುತ್ತಿದೆ ಎಂದು ಠಾಣೆಗೆ ಬರುವಂತೆ ಹೇಳಿದರು. ನಾನು ಬೆಳಿಗ್ಗೆ **08.00** ಗಂಟೆಗೆ ಹಂಪಿ ಪ್ರವಾಸಿ ಪೋಲಿಸ ಠಾಣೆಗೆ ಹೋಗಿರುತ್ತೇನೆ. ಠಾಣೆಯಲ್ಲಿ ಪಂಚರಾದ ಚಾಸಾ **-2** ಮತ್ತು **3,** ತೂಕದ ಯಂತ್ರ ತಂದಿದ್ದ ಚಾಸಾ **-16** ಮತ್ತು ಪೋಲಿಸ ಸಿಬ್ಬಂದಿಗಳೆಲ್ಲಾ ಇದ್ದರು. ನಾವುಗಳೆಲ್ಲರೂ ಕಡ್ಡಿರಾಂಪೂರದ ಉದ್ದಾನಪ್ಪನ ಜಮೀನಿಗೆ ಹೋಗುವ ಕಚ್ಚಾ ರಸ್ತೆಯಲ್ಲಿ ವಾಹನ ನಿಲ್ಲಿಸಿ ಪೂರ್ವ ದಿಕ್ಕಿನಲ್ಲಿರುವ ಹರಿಜನ ನಾರಾಯಣಪ್ಪ ನವರ ಜಮೀನಿನಲ್ಲಿ ನಿಂತು ನೋಡಿದಾಗ ಸ್ವಲ್ಪ ದೂರದಲ್ಲಿ ಯಾರೋ ಇಬ್ಬರು

ಹುಡುಗರು ಏನೋ ಒಂದು ವಸ್ತುವನ್ನು ಕೊಡು ತೆಗೆದುಕೊಳ್ಳುವುದನ್ನು ಮಾಡುತ್ತಿದ್ದರು. ಸದರಿ ಹುಡುಗರು ನಮ್ಮನ್ನು ನೋಡಿ ಗಾಬರಿಗೊಂಡು ಓಡಲು ಪ್ರಯತ್ನಿಸಿದಾಗ ಪೋಲಿಸರು ಬೆನ್ನಟ್ಟಿ ಹಿಡಿದಿರುತ್ತಾರೆ. ಠಾಣಾ ಸಿಬಬಂದಿಗಳು ಆ ಹುಡುಗರ ಜೇಬಿನಲ್ಲಿದ್ದ ನೀಲಿ ಮತ್ತು ಬಿಳಿ ಬಣ್ಣದ ಪ್ಲಾಸ್ಟಿಕ್ ಕವರ್ ಗಳನ್ನು ತೆಗೆದರು. ಸದರಿ ಕವರ್ ನಲ್ಲಿ ಪುಡಿ ಮತ್ತು ಬೀಜ ಮಿಶ್ರಿತವಾಗಿದ್ದ ಯಾವುದೋ ವಸ್ತು ಇತ್ತು ಅದರಿಂದ ವಾಸನೆ ಬರುತ್ತಿತ್ತು. ಆ ಹುಡುಗರಿಗೆ ಕೇಳಿದಾಗ ಅದು ಗಾಂಜಾ ಇರುತ್ತದೆ ಎಂದು ತಿಳಿಸಿರುತ್ತಾರೆ. ನನ್ನ ಸಮಕ್ಷಮ ಚಾಸಾ -1 ರವರು ಆರೋಪಿತರ ಅಂಗಶೋಧನೆಯನ್ನು ಮಾಡಿರುತ್ತಾರೆ. ಚಾಸಾ -16 ರವರು ತೂಕದ ಯಂತ್ರದಲ್ಲಿ ಸದರಿ ಗಾಂಜಾವನ್ನು ತೂಕ ಮಾಡಿದಾಗ ಅದು 200 ಗ್ರಾಂ ಗಿಂತಲೂ ಹೆಚ್ಚು ಇರುವುದು ಕಂಡು ಬಂದಿತ್ತು. ಸದರಿ ಹುಡುಗರು ಹೊಸಪೇಟೆಯ ಕೆನಾಲ್ ಹತ್ತಿರ ಯಾರೋ ಹೆಸರು ಗೊತ್ತಿಲ್ಲದ ವ್ಯಕ್ತಿಯಿಂದ ಗಾಂಜಾ ಖರೀದಿಸಿರುವುದಾಗಿ ಮತ್ತು ಉಪ ಜೀವನಕ್ಕಾಗಿ ಗಾಂಜಾ ಮಾರಾಟ ಮಾಡುತ್ತಿರುವುದಾಗಿ ತಿಳಿಸಿದರು. ಗಾಂಜಾವನ್ನು ಚಾಸಾ -1 ರವರು ಪಂಚರ ಸಮಕ್ಷಮ ಬಿಳಿ ಚೀಲದಲ್ಲಿ ಶೇಖರಿಸಿ ಪಂಚನಾಮೆಯನ್ನು ಮಾಡಿರುತ್ತಾರೆ. ಬೆಳಿಗ್ಗೆ 09.00 ರಿಂದ 10.30 ರವರೆಗೆ ಸ್ಥಳದಲ್ಲಿ ಪಂಚನಾಮೆ ಕ್ರಮ ಜರುಗಿಸಿ ಪಂಚನಾಮೆ ಬರೆದಿರುತ್ತಾರೆ. ಆರೋಪಿತರನ್ನು ವಶಕ್ಕೆ ಪಡೆದಿರುತ್ತಾರೆ. ಪಂಚನಾಮೆಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಪಂಚನಾಮೆ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿಃ 2 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿಃ 2 (ಇ) ಎಂದು ಗುರುತಿಸಲಾಯಿತು. ಸಾಕ್ಷಿ ಪೋಟೋಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ನಿಪಿಃ 4 ಎಂದು ಗುರುತಿಸಲಾಗಿದೆ.

**CC 5125/2023**

**ಸಿ ಡಬ್ಲ್ಯೂ 6**

**ಪಿ ಡಬ್ಲ್ಯೂಃ 5**

ಈ ಬಗ್ಗೆ ನಾನು ಹೇಳಿಕೆಯನ್ನು ನೀಡಿಲ್ಲ. ಮು ಮಾ ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಮು ಮಾ 1 ನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಟಿ ಎಲ್ ಎಸ್ ಕೆ., ವಕೀಲರಿಂದ**

ಚಾಸಾ -1 ರವರು ನನಗೆ ಪರಿಚಿತರು ಅಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಂತರದಲ್ಲಿ ಪರಿಚಯ ಆಗಿರುತ್ತಾರೆ ಎಂದು ನುಡಿಯುತ್ತಾರೆ. ಕರೆ ಬಂದಾಗ ಬೆಳಿಗ್ಗೆ 06.30 ಗಂಟೆ ಆಗಿತ್ತು. ಚಾಸಾ -1 ರವರು ನನಗೆ ಲಿಖಿತ ನೋಟಿಸ್ ನೀಡಿರುವುದಿಲ್ಲ. ಬುಕ್ಕಸಾಗರದಿಂದ ಹಂಪಿ 12-13 ಕಿ ಮೀ ಅಂತರದಲ್ಲಿ ಇರುತ್ತದೆ. ನಾನು ಬುಕ್ಕಸಾಗರದಿಂದ ಹಂಪಿಗೆ ಹೋಗಿಲ್ಲ. ಸಾಕ್ಷಿ ಮುಂದುವರೆದು ನಾನು ಕೆಲಸ ಮಾಡುವುದು ಬುಕ್ಕಸಾಗರದಲ್ಲಿ. ಇರುವುದು ಹೊಸಪೇಟೆಯಲ್ಲಿ ಎಂದು ನುಡಿಯುತ್ತಾರೆ. ನಾನು ಹೊಸಪೇಟೆ ಬಿಟ್ಟಾಗ ಬೆಳಿಗ್ಗೆ 07.00 ಗಂಟೆ ಆಗಿತ್ತು. ಠಾಣೆಯಿಂದ ದಾಳಿ ಮಾಡಲು 6-7 ಜನ ಹೋಗಿದ್ದೇವು. ಪೋಲಿಸ ಠಾಣೆಯಿಂದ ಸ್ಥಳಕ್ಕೆ ಹೋಗುವಾಗ ನಾನು ಯಾವುದೇ ವಸ್ತುವನ್ನು ತೆಗೆದುಕೊಂಡು ಹೋಗಿಲ್ಲ. ಆರೋಪಿತರ ಹೆಸರುಗಳು ನಾವು ಸ್ಥಳಕ್ಕೆ ಹೋದ ನಂತರ ಗೊತ್ತಾಗಿರುತ್ತದೆ. ನಾವು ನೋಡಿದಾಗ ಸ್ಥಳದಲ್ಲಿ ಇಬ್ಬರು ಆರೋಪಿತರು ಮಾತ್ರ ಇದ್ದರು. ಬೇರೆ ಯಾರೂ ಇರಲಿಲ್ಲ. ನಾವು ನಿಂತಿದ್ದ ಜಮೀನಿನಿಂದ ಆರೋಪಿತರು ಇದ್ದರು ಎನ್ನಲಾದ ಸ್ಥಳ 35 ರಿಂದ 40 ಮೀಟರ್ ಅಂತರದಲ್ಲಿ ಇತ್ತು. ಆಗ ನಾವು ಅಲ್ಲಿ 6-7 ಜನ ಇದ್ದೇವು. ನಮ್ಮ ಬಳಿ ಯಾವುದೇ ವಸ್ತು ಇರಲಿಲ್ಲ ಅಂದರೆ ಸರಿ.

**CC 5125/2023**

ನಾನು ಶಾಲಾ ಅವಧಿಯಲ್ಲಿ ಶಾಲೆ ಕೆಲಸ ಬಿಟ್ಟು ಬೇರೆ ಕೆಲಸಕ್ಕೆ ಹೋದರೆ ಮೇಲಾಧಿಕಾರಿಗಳಿಂದ ಅನುಮತಿ ಪಡೆಯ ಬೇಕಾಗುತ್ತದೆ ಅಂದರೆ ಸರಿ. ನಾನು ದಾಳಿಗೆ ಹೋಗುವುದಕ್ಕೂ ಮೊದಲು ಲಿಖಿತವಾಗಿ ಮೇಲಾಧಿಕಾರಿಗಳ ಅನುಮತಿ ಪಡೆದಿರುವುದಿಲ್ಲ. ಆ ದಿನ ನಾನು ಶಾಲಾ ಕರ್ತವ್ಯಕ್ಕೆ ಹಾಜರು ಆಗಿರುತ್ತೇನೆ. ನಾನು ಚಾಸಾ -1 ರವರು ಮಾಹಿತಿ ನೀಡಿದ್ದರಿಂದ ದಿಃ 24-06-2023 ರಂದು ಠಾಣೆಯಿಂದ ಸ್ಥಳಕ್ಕೆ ಅವರೊಂದಿಗೆ ಹೋಗಿದ್ದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಅಂಗಶೋಧನೆ ಮಾಡಲು ಅನುಮತಿಯನ್ನು ಮೌಖಿಕವಾಗಿಯೇ ಪಡೆಯಲಾಗಿತ್ತು. ಲಿಖಿತ ರೂಪದಲ್ಲಿ ಆರೋಪಿತರ ಅನುಮತಿ ಪಡೆದು ಅವರ ಸಹಿ ಪಡೆದಿರುವುದಿಲ್ಲ ಅಂದರೆ ಸರಿ. ನಾನು ಆ ಸ್ಥಳಕ್ಕೆ ಹೋಗದ ಕಾರಣ ಅಂಗಶೋಧನೆ ಮಾಡುವ ಪ್ರಮೇಯವೇ ಬಂದಿರಲಿಲ್ಲ ಅಂದರೆ ಸರಿಯಲ್ಲ. ಆರೋಪಿತರ ತಾಬಾದಿಂದ ಯಾವುದೇ ವಸ್ತು ಸಿಕ್ಕಿರಲಿಲ್ಲ ಅದನ್ನು ನಮ್ಮ ಸಮಕ್ಷಮ ತೂಕ ಮಾಡಿಲ್ಲ ಮತ್ತು ಪಂಚನಾಮೆ ಮಾಡಿ ಜಪ್ತು ಪಡಿಸಿಕೊಂಡಿಲ್ಲ ಅಂದರೆ ಸರಿಯಲ್ಲ. ಪೋಲಿಸರು ನನಗೆ ಪರಿಚಿತರಾಗಿರುವುದರಿಂದ ಸದರಿಯವರ ಮಾತು ಕೇಳಿ ಠಾಣೆಯಲ್ಲಿಯೇ ಅವರು ಸೃಷ್ಟಿಸಿದ ದಾಖಲೆಗೆ ಸಹಿ ಮಾಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ನಾನು ನ್ಯಾಯಾಲಯದ ಮುಂದೆ ಹೇಳಿರುವ ವಿಷಯವನ್ನು ಇದೇ ಮೊದಲ ಬಾರಿಗೆ ಹೇಳುತ್ತಿದ್ದೇನೆ. ನನಗೆ ಘಟನೆಯ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ, ನಾನು ಸ್ಥಳಕ್ಕೆ ಹೋಗಿಲ್ಲ, ಪೋಲಿಸರ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆ- ಇಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು
ಹಾಗೂ ಜೆ.ಎಂ.ಎಫ್.ಸಿ., ಹೊಸಪೇಟೆ.